ಅದಕ್ಕೆ ಪೈಪ್ ಲೈನ್ ಇರತಕ್ಕಂಥದ್ದನ್ನು ನಾವು ಕೊಡುತ್ತೇವೆ. ಆ ಪ್ರಕಾರವಾಗಿ ನಾವು ಕ್ರಮವನ್ನು ಕೈಗೊಳ್ಳುತ್ತೇವೆಂದು ಹೇಳಬಯಸುತ್ತೇನೆ.

ಶ್ರೀ ಸಿ.ಟಿ.ರವಿ (ಚಿಕ್ಕಮಗಳೂರು): ಮಾನ್ಯ ಉಪಾಧ್ಯಕ್ಷರೆ, ನನಗೆ ಅನುಮತಿ ಕೊಟ್ಟಿದ್ದಕ್ಕೆ ತಮಗೆ ವಂದಿಸುತ್ತೇನೆ. ಕಳೆದ 54 ಗಂಟೆಗಳಿಂದ ಗ್ರಾಮ ವಿದ್ಯುತ್ ಪ್ರತಿನಿಧಿಗಳು ಜಕ್ಕರಾಯನಕೆರೆ ಮೈದಾನದಲ್ಲಿ ತಮ್ಮ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಧರಣಿ ಕುಳಿತಿದ್ದಾರೆ. ದುರ್ದೈವದ ಸಂಗತಿ ಪ್ರಜಾಸತ್ತಾತ್ಮಕ ರೀತಿಯಲ್ಲಿ ಹೋರಾಟ ಮಾಡುತಿರತಕ್ಕಂಥ ಆ ಪ್ರತಿನಿಧಿಗಳ ಅಹವಾಲನ್ನು ಕೇಳಲಿಕ್ಕೆ ಕೂಡ ಸರ್ಕಾರದ ಕಡೆಯಿಂದ ಯಾರು ಹೋಗಿಲ್ಲ. ಶಾಂತಿಯುತವಾಗಿ ಯಾರು ಅಲ್ಲಿ ಧರಣಿ ಮಾಡುತ್ತಿದ್ದಾರೆ ಅವರನ್ನು ಪೊಲೀಸ್ ಬಲದ ಮೂಲಕ ಹೊರಗೆ ಹಾಕಿಸಲಿಕ್ಕೆ ಗಾಂಧೀನಗರದ ಇನ್ಸ್‌ಪೆಕ್ಟರ ದಬ್ಬಾಳಿಕೆ ನಡೆಸಿ ಹೊರಗೆ ಹಾಕಿದ ಶಾಸಕರ ಜೊತೆಯಲ್ಲಿ ಮಾತನಾಡುತ್ತೇವೆಂದು ಹೇಳಿದರೆ ಯಾವ ಶಾಸಕರ ಜೊತೆಯಲ್ಲಿ ಮಾತನಾಡುತ್ತೀರಿ ಎಂದು ಅವ್ಯಾಚ್ಯವಾಗಿ ಶಾಸಕರನ್ನು ನಿಂದಿಸುವಂಥ ಕೆಲಸವನ್ನು ಮಾಡಿದ್ದಾರೆ. ಮಾನ್ಯ ವಾಟಾಳ್ ನಾಗರಾಜ್‌ರವರು ಮಧ್ಯೆದಲ್ಲಿ ಅವರು ಪ್ರವೇಶ ಮಾಡಿ ಧರಣಿ ನಡೆಸಲು ಅನುಮತಿಯನ್ನು ಕೊಡಿಸುವಂತ ಸ್ಥಿತಿ ಬಂದಿದೆ. ಹಾಗಾಗಿ ಆ ಗ್ರಾಮ ವಿದ್ಯುತ್ ಪ್ರತಿನಿಧಿಗಳ ಬೇಡಿಕೆಯನ್ನು ಕೂಲಂಕುಷವಾಗಿ ಸರ್ಕಾರ ಪರಿಶೀಲಿಸಿ ಪರಿಗಣಿಸಬೇಕು. ಅವರನ್ನು ಏಕಾಏಕಿಯಾಗಿ ಅವರಿಂದ ಡೆಪಾಸಿಟ್ ಕಟ್ಟಿಸಿಕೊಂಡು ಒಂದು ಲಕ್ಷ, 80 ಸಾವಿರ ರೂ.ಗಳ ಡಿಪಾಸಿಡ್ ಕಟ್ಟಿಸಿಕೊಂಡು 5 ತಿಂಗಳಿನಿಂದ ಸಂಬಳವನ್ನು ಕೊಡದೇ ಬಿಟ್ಟರೆ ಆ ಜನ ಏನಾಗಬೇಕು. ಡಿಪಾಸಿಟ್ ಹೋಯಿತು. ಈ ಕಡೆ ಗೌರವಧನ ಇಲ್ಲದಿರುವ ಪರಿಸ್ಥಿತಿಯಲ್ಲಿ ಆ ಗ್ರಾಮ ವಿದ್ಯುತ್ ಪ್ರತಿನಿಧಿಗಳಿದ್ದಾರೆ. ಹಾಗಾಗಿ ಅವರ ಬೇಡಿಕೆ ಬಗ್ಗೆ ಸರ್ಕಾರ ಸಹಾನುಭೂತಿಯಿಂದ ಪರಿಶೀಲಿಸಬೇಕು ಮತ್ತು ಈ ಕ್ಷಣದಲ್ಲಿಯೇ ಆ ಧರಣಿ ನಡೆಸುತ್ತಿರುವಂಥ ಸ್ಥಳಕ್ಕೆ ಸರ್ಕಾರದ ಪ್ರತಿನಿಧಿಯನ್ನು ಕಳುಹಿಸಿಕೊಡಬೇಕೆನ್ನುವ ಒತ್ತಾಯವನ್ನು ತಮ್ಮ ಮೂಲಕ ಸರ್ಕಾರಕ್ಕೆ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಉಪಾಧ್ಯಕ್ಷರೆ, ತಮಗೆ ಹೇಳುತ್ತೇವೆ, 6 ಸಾವಿರ ಜನ ಊರಿಗೆ ಬಂದಿದ್ದಾರೆ. ಮಳೆಯಲ್ಲಿ ನೆನೆಯುತ್ತಿದ್ದರೆ ಸರಿಯಾದ ಸ್ಥಳ ಕೊಡಲಿಲ್ಲ. ಬೀದಿಗೆ ಹಾಕತಕ್ಕಂಥ ಪರಿಸ್ಥಿತಿಯಾಯಿತು. ಅವರಿಗೆ 5–6 ತಿಂಗಳಿನಿಂದ ಸಂಬಳ ಕೊಟ್ಟಿಲ್ಲ. ಮನವಿಯನ್ನು ಸಲ್ಲಿಸೋಣವೆಂದು ಬಂದರೆ ಅವರು ಕಂಪ್ಲೀಟ್ ಬೀದಿಯಿಂದ ಹೊರಗಡೆ, ಜಕ್ಕರಾಯನಕೆರೆಗೆ, ಈ ಕಡೆಗೆ ಅವರನ್ನು ಬಿಡಲೇ ಇಲ್ಲ. ಅವರನ್ನು ಜಕ್ಕರಾಯನಕೆರೆಗೆ ಹಾಕಿದ್ದಾರೆ. ಈ ಪರಿಸ್ಥಿತಿ ಇರುವಾಗ ತಾವೆಲ್ಲಾ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಇರತಕ್ಕಂಥವರು ಸ್ವಲ್ಪ ಸಾವಧಾನವಾಗಿ ಇಂತಹವರು ಬಂದಾಗ ಮೆರವಣಿಗೆ ಬಂದಾಗ ಅವರನ್ನು ನೋಡಿ ಮಾಡಿ ತಾವು ಹೋಗದಿದ್ದರೆ

ಅಧಿಕಾರಿಗಳಾದರೂ ಹೋಗಿ ಅವರ ಮನವಿಯನ್ನು ನೋಡಿ ಅದು ಆಗದಿದ್ದರೆ 10 ಜನ ಇಲ್ಲಿಗಾದರೂ ಬನ್ನಿ ಎಂದು ಹೇಳಿ ಅದು ಮಾಡಲಿಲ್ಲ. ಅವರ ಪರಿಸ್ಥಿತಿ ಬಹಳ ಹೀನಾಯವಾಗಿದೆ. ತಾವು ಸಂಬಂಧಪಟ್ಟವರು ಸರಿಯಾದ ರೀತಿಯಲ್ಲಿ ಅವರಿಗೆ ಅನುಕೂಲ ಮಾಡಿಕೊಡಬೇಕು.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳೂ ನಿನ್ನೆ ಒಂದು ಪ್ರತಿಭಟನೆಯ ಸಲುವಾಗಿ, ಹೋರಾಟದ ಸಲುವಾಗಿ ಜೈಲು ಇದ್ದಂಥ ಆವರಣದಲ್ಲಿ ಒಂದು ಅವಕಾಶವನ್ನು ಮಾಡಿಕೊಡುತ್ತೇನೆನ್ನುವ ಮಾತನ್ನು ತಾವು ನಿನ್ನೆ ಹೇಳಿದಿರಿ. 6 ಸಾವಿರ ಜನ ಗ್ರಾಮೀಣ ಭಾಗದಲ್ಲಿ ಕೆಲಸ ಮಾಡುವ ವಿದ್ಯುತ್ ಜನಪ್ರತಿನಿಧಿಗಳಾಗಿ ಕೆಲಸ ಮಾಡುವವರು ಅವರು ಅವರ ಒಂದು ಮನವಿಯನ್ನು ಸರ್ಕಾರಕ್ಕೆ ಕೊಡಬೇಕೆಂದರೆ ಸರಿಯಾದಂಥ ಒಂದು ರಕ್ಷಣೆ ಇಲ್ಲ, ಸರ್ಕಾರದಿಂದ ಸರಿಯಾದ ಒಂದು ಸ್ಪಂದನ ಇಲ್ಲ. ಇದು ಈ ರೀತಿಯಾಗಬಾರದು. ಅವರ ಬೇಡಿಕೆ ಯಾವುದು ಇದೆ ಎಂದು ತಾವು ವಿಚಾರ ಮಾಡಿ ಅಧಿಕಾರ ಅಲ್ಲ ಮಂತ್ರಿಗಳೆ ಹೋಗಬೇಕಾಗಿತ್ತು. ಎಷ್ಟೋ ಹೋರಾಟಗಳು ಬಂದಂಥ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಸ್ವತಃ ಹೋಗಿದ್ದಾರೆ. ಅಲ್ಲಿ ಹೋಗಿ ಮನವಿ ಪತ್ರ ತೆಗೆದುಕೊಂಡಿದ್ದಾರೆ. ಮಂತ್ರಿಗಳು ಹೋಗಬಹುದಾಗಿತ್ತು ಅಥವಾ ಯಾರಾದರೂ ಅಧಿಕಾರಿಗಳನ್ನಾದರೂ ಕಳುಹಿಸಬಹುದಾಗಿತ್ತು.

ಉಪಾಧ್ಯಕ್ಷರು: ಅಲ್ಲಾ ನಿಮ್ಮ ಪ್ರಶ್ನೆ ಅವರಿಗೆ ಅರ್ಥವಾಗಿದೆ. ಮಂತ್ರಿಗಳಿಗೆ ಉತ್ತರ ಹೇಳುವುದಕ್ಕೆ ಸ್ವಲ್ಪ ಬಿಡಿ. ಆಗಲೇ ಹೇಳಿದ್ದೆ ಹೇಳುತ್ತೀರಿ ಅಲ್ಲಾ?

ಶ್ರೀವಾಟಾಳ್ ನಾಗರಾಜ್: ಪೋಲೀಸ್ ಆಯುಕ್ತರಿಗೆ ದೂರವಾಣಿ ಮೂಲಕ ಮಾತನಾಡಿ ಕೊಡಿಸಬೇಕಾಗಿತ್ತು, ಅವರ ಪರಿಸ್ಥಿತಿ ಹದಗೆಟ್ಟು ಹೋಗಿತ್ತು. ರಾತ್ರಿ 12 ಗಂಟೆಯಾಗಿತ್ತು ತಮಗೆ ಇದನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಸಿ.ಟಿ.ರವಿ: ಮಾನ್ಯ ಉಪಾಧ್ಯಕ್ಷರೆ, ಪೋಲೀಸ್ ಇನ್ಸ್ ಪೆಕ್ಟರ್ ಮೇಲೆ ಕ್ರಮ ಕೈಗೊಳ್ಳಬೇಕು. ಇಡೀ ಶಾಸಕರ ಬಗ್ಗೆ ಯಾವ ಶಾಸಕನಿಗೆ ಫೋನ್ ಮಾಡುತ್ತಿಯೋ ನಾನು ಶಾಸಕರನ್ನು ಕಂಡಿದ್ದೀನಿ, ಮಂತ್ರಿಗೂ ಬೇಕಾದರೆ ಮಾಡಿಕೋ ಎಂದು ಅವ್ಯಾಚ್ಯವಾಗಿ ಮಾತನಾಡಿದ್ದಾನೆ. ಹಾಗಾದರೆ ಕೆಲಸ ಮಾಡುವುದು ಹೇಗೆ. ಈ ಸರ್ಕಾರದಲ್ಲಿ ಶಾಸಕರ ಪರಿಸ್ಥಿತಿ ಹೀಗಾದರೆ, ಗಾಂಧೀನಗರ ಇನ್ಸ್‌ಪೆಕ್ಟರ್ ಜೈಗೋಪಾಲ್ ಎಂದು ಏನೋ ಇದೆ.

ಶ್ರೀ ಅಲ್ಲೋಡ್ ಹನುಮಂತಪ್ಪ(ರೇವದುರ್ಗ): ಮಾನ್ಯ ಉಪಾಧ್ಯಕ್ಷರೆ, ಅವರು ಕೊಡುವಂತಹ ಮನವಿ ಬಗ್ಗೆ ಸರ್ಕಾರ ಪರಿಶೀಲನೆಯನ್ನು ಮಾಡಬೇಕು. ಒಂದು

ಕಾಲದಲ್ಲಿ ಚಳುವಳಿ ಮಾಡುವುದಕ್ಕೆ ಬಂದಾಗ ಅದು ಬೇಡ ಎಂದು ಹೇಳಿದರೋ, ಅಥವಾ ಬೇಕೆಂದು ಹೇಳಿದರೋ ಅದು ಮುಖ್ಯವಾಗಿದ್ದರೂ ಕೂಡ ಅದರ ಜೊತೆಯಲ್ಲಿ ಪ್ರತಿನಿಧಿಗಳಿಗೆ ಸರ್ಕಾರ ಏನೋ ಒಂದು ಆದೇಶವನ್ನು ಮಾಡಿದ್ದೆಂದರೆ ಗ್ರಾಮ ವಿದ್ಯುತ್ ಸಪ್ಲೈ ಮಾಡತಕ್ಕಂತಹ ಸಂದರ್ಭದಲ್ಲಿ ಅ ಪ್ರತಿನಿಧಿಗಳನ್ನು ಆಯ್ಕೆ ಮಾಡಿದ್ದಾರೆಅದಕ್ಕೆ ಸಂಭಾವನೆಯನ್ನು ಕೊಡಬೇಕೆಂದು ಚಳುವಳಿಯನ್ನು ಮಾಡಿದರು. ಆ ಪ್ರತಿನಿಧಿಗಳಿಗೆ ಪ್ರೋತ್ಸಾಹಧನವನ್ನು ಕೊಡಬೇಕೆಂದು, ಆ ಪ್ರೋತ್ಸಾಹ ಧನವನ್ನು ಕೊಡುವಂತಹ ಸಂದರ್ಭದಲ್ಲಿ ಸರ್ಕಾರ ಅದಕ್ಕೆ ಸ್ಪಂದಿಸಬೇಕು, ಪ್ರೋತ್ಸಾಹ ಧನವನ್ನು ಕೊಡುವುದರ ಬಗ್ಗೆ ನಮ್ಮ ಒತ್ತಾಯವಿದೆ. ಇದರ ಬಗ್ಗೆ ಸಂಬಂಧಪಟ್ಟಂತಹ ಮಂತ್ರಿಗಳೂ ಬಂದು ಭಾಗವಹಿಸಿ ಅವರಿಗೆ ಏನು ಪರಿಹಾರವನ್ನು ಕೊಡುತ್ತಾರೆ ಎನ್ನುವಂತಹ ವಿಷಯದಲ್ಲಿ ಅದಕ್ಕೆ ಉತ್ತರವನ್ನು ಹೇಳಬೇಕು. ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಎನ್.ಎಲ್. ನರೇಂದ್ರ ಬಾಬು (ರಾಜಾಜಿನಗರ): ಮಾನ್ಯ ಉಪಾಧ್ಯಕ್ಷರೆ, ಯುವಕರು ಹತಾಶಸ್ಥಿತಿಗೆ ತಲುಪಬಾರದು, ರಾಜಧಾನಿಗೆ ಬಂದು ಸರ್ಕಾರದ ಮುಂದೆ ಅಹವಾಲು ಹೇಳುವುದಕ್ಕೆ ಬಂದಿದ್ದಾರೆ. ಅದರ ಬಗ್ಗೆ ಸಂಬಂಧಪಟ್ಟಂತಹ ಅಧಿಕಾರಿಗಳೂ ಅದಕ್ಕೆ ಸಂಬಂಧಪಟ್ಟವರು ಹೋಗಿ ಸ್ಪಂದಿಸಲಿ. ಅವರು ಬೇಸತ್ತು ಬೆಳಿಗ್ಗೆ ಬಂದು ನಾವು ಯಾರಿಗೆ ಹೇಗೆ ಹೇಳಿಕೊಳ್ಳಬೇಕು ಅಹವಾಲನ್ನು ಹೇಳಿದರು. ಯುವಕರ ಬಗ್ಗೆ ತಾಳ್ಮೆಯನ್ನು ಪರೀಕ್ಷೆ ಮಾಡುವುದು ಬೇಡ ಜಕ್ಕರಾಯನಕೆರೆಯಿಂದ ಅಲ್ಲಿಂದ ವಾಪಸ್ಸು ಕಳುಹಿಸುವುದು ಬೇಡ, ಆ ಗ್ರಾಮ ವಿದ್ಯುತ್ ಪ್ರತಿನಿಧಿಗಳಿಗೆ ಸ್ಪಂದನೆ ಮಾಡುವ ಬಗ್ಗೆ ಸಂಬಂಧಪಟ್ಟವರನ್ನು ಅಲ್ಲಿಗೆ ಕಳುಹಿಸಬೇಕೆಂದು ನಾನು ಸರ್ಕಾರಕ್ಕೆ ತಮ್ಮ ಮುಖೇನ ವಿನಂತಿಯನ್ನು ಮಾಡುತ್ತಿದ್ದೇನೆ.

ಶ್ರೀ ಮಹಿಮಾ ಪಟೇಲ್ (ಚನ್ನಗಿರಿ): ಮಾನ್ಯ ಉಪಾಧ್ಯಕ್ಷರೆ, ಗ್ರಾಮೀಣ ವಿದ್ಯುತ್ ಪ್ರತಿನಿಧಿಗಳು ಇಲ್ಲಿಗೆ ಯುವಕರು ಏನು ಬಂದಿದ್ದಾರೆ. ಇವರು ಕೆಲಸ ಪ್ರಾರಂಭ ಮಾಡಿದ ಮೇಲೆ ಕಲೆಕ್ಷನ್ ಏನಿದೆ. ಅದು ತುಂಬಾ ಹೆಚ್ಚಾಗಿದೆ. ಆದರೆ ಈ ವಿದ್ಯುತ್ ಇಲಾಖೆಯಲ್ಲಿ ಅವರನ್ನು ಒಂದು ತರಹ ಬಹಳ ಥರ್ಡ್ ಗ್ರೇಡ್ ನೌಕರ ಎನ್ನುವಂತಹ ತರಹದಲ್ಲಿ ತುಚ್ಛವಾಗಿ ಕಾಣುತ್ತಿದ್ದಾರೆ. ಅವರು ಗುಲಾಮರ ಕಾಣುತ್ತಿ ದ್ದಾರೆ. ಅವರಿಗೆ ಯಾವುದೇ ತರಹದ ಭದ್ರತೆಗಳು ಇಲ್ಲದೆ ಇದ್ದಾಗ ಅಂತಹ ಮನುಷ್ಯ ಯಾವ ತರಹ ವರ್ತನೆ ಮಾಡುತ್ತಾನೆ, ಎಷ್ಟು ಭಯವಿರುತ್ತದೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಅವರಿಗೆ ಭದ್ರತೆಯನ್ನು ಒದಗಿಸುವುದು ಬಹಳ ಮುಖ್ಯ. ಅವರಿಗೆ ಗೌರವವನ್ನು ಸರ್ಕಾರದ ವತಿಯಿಂದ ಒದಗಿಸಿಕೊಡುವುದು ಬಹಳ ಮುಖ್ಯವಾದ ಕೆಲಸವಾಗಿದೆ. ಅದರ ಬಗ್ಗೆ ನಮ್ಮ ಸರ್ಕಾರದಿಂದ ಯಾರಾದರೂ ತಕ್ಷಣ ಅಲ್ಲಿಗೆ ಪ್ರತಿನಿಧಿಗಳು ಹೋಗಿ

ಅವರ ಅಹವಾಲುಗಳನ್ನು ಕೇಳಿ ಅವರಿಗೆ ಸೂಕ್ತವಾದಂತಹ ಪರಿಹಾರವನ್ನು ಒದಗಿಸುವುದರ ಕಡೆಗೆ ನಾವು ಗಮನ ಕೊಡಬೇಕಾಗಿದೆ.

ಶ್ರೀ ಎಂ.ಪಿ. ಪ್ರಕಾಶ್(ಕಂದಾಯ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಪ್ರಜಾಪ್ರಭುತ್ವದಲ್ಲಿ ಪ್ರತಿಭಟನೆ ಒಂದು ಸಹಜವಾದ ಅಸ್ತ್ರವಾಗಿದೆ. ಆ ಕಾರಣಕ್ಕಾಗಿ ಅವರನ್ನು ಗೌರವದಿಂದ ಕಾಣಬೇಕು ಸರ್ಕಾರ ಅದಕ್ಕೆ ಸ್ಪಂದಿಸಬೇಕೆಂದು ಏನು ಇದೆ, ಅದು ನಿಜವಾಗಿಯೂ ಒಪ್ಪುವಂತಹ ವಿಷಯವಾಗಿದೆ. ಯಾವುದಾದರೂ ಸಂದರ್ಭದಲ್ಲಿ ನಾವು ಈ ಸದನ ನಡೆಯುತ್ತಿದ್ದ ಕಾರಣಕ್ಕಾಗಿ ಪ್ರಾಯಶಃ ಹೋಗುವುದಕ್ಕಾಗಲಿಲ್ಲ, ಆದರೆ ನಾವು ಈ ದಿವಸ ಯಾರಾದರೂ ಒಬ್ಬರು ಹೋಗಿ ಪ್ರತಿಭಟನೆ ಮಾಡತಕ್ಕಂತಹ ಆ ಪ್ರತಿನಿಧಿಗಳ ಜೊತೆಗೆ ಮಾತನಾಡಿ ಅವರ ಸಮಸ್ಯೆಯನ್ನು ಅರ್ಥಮಾಡಿಕೊಂಡು ಯಾವುದು ಪರಿಹಾರ ಮಾಡುವುದಕ್ಕೆ ಸಾಧ್ಯವಾಗುತ್ತದೆ ಅದರ ಬಗ್ಗೆ ಅವರ ಹತ್ತಿರ ಮನವಿಯನ್ನು ಸ್ವೀಕಾರ ಮಾಡುತ್ತೇವೆ. ಸಂಬಂಧಪಟ್ಟ ಮಂತ್ರಿಗಳಿಗೂ ಕೂಡ ಗೌರವ ಧನ ವಿತರಣೆ ಮಾಡುವುದರ ಬಗ್ಗೆ ಕ್ರಮ ಕೈಗೊಳ್ಳುವುದರ ಬಗ್ಗೆ ವಿಚಾರವನ್ನು ಕೂಡ ತಿಳಿಸುತ್ತೇನೆ.

ಉಪಾಧ್ಯಕ್ಷರ ಅಪ್ಪಣೆಯ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು:–

ಶ್ರೀ ಕೆ.ಆರ್. ರಮೇಶ್ ಕುಮಾರ್ (ಶ್ರೀನಿವಾಸಪುರ): ಮಾನ್ಯ ಉಪಾಧ್ಯಕ್ಷರೆ, ಶ್ರೀನಿವಾಸಪುರ ಪ್ರಥಮ ದರ್ಜೆ ಕಾಲೇಜಿನಲ್ಲಿ ಉಪನ್ಯಾಸಕರ ಹುದ್ದೆಗಳೆಲ್ಲಾ ಖಾಲಿ ಇದೆ. ಇಂತಹವರು ನಾವು ಬರುತ್ತೇವೆಂದು ಬರೆದುಕೊಟ್ಟರು ಕೂಡ ಅವರನ್ನು ಕೂಡ ಹಾಕುವುದಿಲ್ಲ. ತಾವಾಗಿಯೇ ಕೂಡ ಅಲ್ಲಿ ಭರ್ತಿಯನ್ನು ಮಾಡುವುದಿಲ್ಲ. ಅದು ಸರ್ಕಾರಿ ಕಾಲೇಜಾಗಿದೆ. ಈಗಾಗಲೇ ನಾವು ಕೋಲಾರ ಜಿಲ್ಲೆಯವರು ಬಹಳ ದೊಡ್ಡ ಗೌರವವನ್ನು ಗಳಿಸಿಕೊಂಡಿದ್ದೇವೆ. ಎಸ್ ಎಸ್ ಎಲ್ ಸಿಯಲ್ಲಿ ಕಡೆಯ ಸ್ಥಾನದಲ್ಲಿದ್ದೇವೆ. ಇದರ ಬಗ್ಗೆ ಮಾನ್ಯ ಮಂತ್ರಿಗಳೂ ದೊಡ್ಡ ಮನಸ್ಸು ಮಾಡಿ ಉಪನ್ಯಾಸಕರನ್ನು ತುಂಬುವಂತಹ ಕೆಲಸವನ್ನು ಮಾಡಬೇಕು.

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಉಪಾಧ್ಯಕ್ಷರೆ, ನಿನ್ನೆಯ ದಿವಸ ಇದರ ಬಗ್ಗೆ ಹೇಳಿದ್ದೇನೆ. ಶಿಕ್ಷಣ ಇಲಾಖೆಯ ಬೇಡಿಕೆಯ ಮೇಲೆ ಚರ್ಚೆಯಾಗುವಂತಹ ಸಂದರ್ಭದಲ್ಲಿ ಹೇಳಿದ್ದೇವೆ. 15ನೇ ತಾರೀಖಿನೊಳಗಾಗಿ ನಾನು ಎಲ್ಲೆಲ್ಲಿ ಹುದ್ದೆಗಳು ಖಾಲಿ ಇದೆ. ಆ ಸ್ಥಳಗಳಿಗೆ ಲೆಕ್ಚರರ್ಸ್‌ನ್ನು ಹಾಕುತ್ತೇವೆಂದು ಹೇಳಿದ್ದೆವೋ ಅದೇ ರೀತಿಯಲ್ಲಿ ಹಾಕುತ್ತೇವೆ.

ಶ್ರೀ ಕೆ.ಆರ್. ರಮೇಶ್ ಕುಮಾರ್: ನಾನು ಅದರ ಬಗ್ಗೆ ನಂಬಿಸುವುದಕ್ಕೆ ಹೋಗುವುದಿಲ್ಲ, ಒಬ್ಬ ಉಪನ್ಯಾಸಕ ಬರುವುದಕ್ಕೆ ತಯಾರಾಗಿದ್ದೇವೆ. ಅಲ್ಲಿ ವೇಕೆನ್ಸಿ